ರಾಜ್ಯದಲ್ಲಿ ಪ್ರೀಯೂನಿವರ್ಸಿಟಿ ಕಾಲೇಜುಗಳ ಪ್ರವೇಶ

2613(2970) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಪ್ರೀಯೂನಿವರ್ಸಿಟಿ ತರಗತಿಗಳನ್ನು ನಡೆಸುವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಕಳೆದ ವರ್ಷದಲ್ಲಿ ಈ ಎಲ್ಲಾ ಕಾಲೇಜುಗಳಲ್ಲೂ ಸರ್ಕಾರಿ ನಿಗಧಿಸಿದ ಸಂಖ್ಯೆ ಎಷ್ಟು; ಹಾಗೂ ಪ್ರವೇಶ ಆಗಿರುವುದೆಷ್ಟು;

ಇ) ಪ್ರೀಯೂನಿವರ್ಸಿಟಿಯಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಪ್ರವೇಶದ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಉಲ್ಲಂಘಿಸಿರುವುದು ಮತ್ತು ಡೊನೇಷನ್‌ನನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಉ) ಇವುಗಳನ್ನು ತಪ್ಪಿಸಲು ಸಿ.ಇ.ಟಿ. ಮಾದರಿಯಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಲು ಸರ್ಕಾರದ ಒಪ್ಪಿಗೆ ಇದೆಯೆ; ಒಪ್ಪಿದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಒಟ್ಟು 2095 ಶಿಕ್ಷಣವನ್ನು ಬೋಧಿಸುವ ಕಾಲೇಜುಗಳು ಇರುತ್ತವೆ.

ಆ) ಪದವಿಪೂರ್ವ ಶಿಕ್ಷಣದಲ್ಲಿ - ಒಂದು ತರಗತಿಗೆ 90 ವಿದ್ಯಾರ್ಥಿಗಳನ್ನು ನಿಗಧಿಪಡಿಸಲಾಗಿದೆ. ವಿವಿಧ ಕಾಲೇಜುಗಳಿಗೆ ಸಂಯೋಜನೆಗಳನ್ನು ಕೊಟ್ಟಿರುವ ಆಧಾರದ ಮೇಲೆ ಮತ್ತು ಮೂಲಭೂತ ಸೌಲಭ್ಯಗಳು ಇರುವುದರ ಮೇಲೆ ತರಗತಿಗಳನ್ನು ಕೊಡಲಾಗಿದೆ. ಎಲ್ಲಾ ಕಾಲೇಜುಗಳಲ್ಲಿ ಸುಮಾರು 4 ಲಕ್ಷ ವಿದ್ಯಾರ್ಥಿಗಳನ್ನು ಪ್ರಥಮ ಪಿ.ಯುಸಿಗೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. 2000-01ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿಗೆ 3,22,039 ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

ಇ) ಬಂದಿದೆ. ಅನೇಕ ವಿದ್ಯಾರ್ಥಿಗಳು ಬೇರೆ ಬೇರೆ ರಾಜ್ಯಗಳಲ್ಲಿ 10ನೇ ತರಗತಿ ಮುಗಿಸಿಕೊಂಡು ಇಲ್ಲಿ ಬಂದು ಪ್ರಥಮ ಪಿಯುಸಿ ತರಗತಿಗೆ ದಾಖಲಾಗಿರುವುದು ಅನೇಕ ವರ್ಷಗಳಿಂದ ನಡೆದುಬಂದ ಪದ್ಧತಿಯಾಗಿದೆ. ಸಿಬಿಎಸ್‌ಇ,ಐಸಿಎಸ್‌ಇ ಹಾಗೂ ಬೇರೆ ರಾಜ್ಯಗಳು ಬೋರ್ಡು ನಡೆಸುವ ಪರೀಕ್ಷೆಗಳಿಂದ ಪಾಸಾದ ವಿದ್ಯಾರ್ಥಿಗಳು ಬರುತ್ತಾರೆ.

ಈ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ಇಲಾಖೆಯ ಗಮನಕ್ಕೆ ನಿರ್ದಿಷ್ಟ ದೂರುಗಳು ಬಂದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇಲಾಖೆ ಹೊರಡಿಸಿರುವ ದಾಖಲಾತಿ ಸುತ್ತೋಲೆಯಲ್ಲಿ ರೋಸ್ಟರ್ ಪದ್ಧತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಉ) ಇಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಸೀಟುಗಳು

2614(2971) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಸರ್ಕಾರ ಹಾಗೂ ಖಾಸಗಿ ವಲಯ ಮಂಜೂರಾತಿ ಮಾಡಿರುವ ಸೀಟುಗಳ ಸಂಖ್ಯೆ ಎಷ್ಟು? (ಕಾಲೇಜುವಾರು ವಿವರ ನೀಡುವುದು)

ಆ) ಕಳೆದ ವರ್ಷ ಎಲ್ಲಾ ಸೀಟುಗಳು ಭರ್ತಿಯಾಗಿವೆಯೇ? (ಕಾಲೇಜುವಾರು ವಿವರ ನೀಡುವುದು)

ಇ) ಸರ್ಕಾರದ ಇಲಾಖೆಯಲ್ಲಿರುವ ವೈದ್ಯರುಗಳಿಗೆ ಇನ್-ಸರ್ವಿಸ್ ಕೋಟಾ ಎಷ್ಟು? ಹಾಗೂ ಇವುಗಳು ಭರ್ತಿಯಾಗಿವೆಯೇ? (ಕಾಲೇಜುವಾರು ವಿವರ ನೀಡುವುದು)

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಸರ್ಕಾರಿ ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳಲ್ಲಿರುವ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಪದವಿ ಸೀಟುಗಳ ಕಾಲೇಜುವಾರು ವಿವರಣಾ ಪಟ್ಟಿ ಲಗತ್ತಿಸಲಾಗಿದೆ.

ಆ) ಎಲ್ಲಾ ಸೀಟುಗಳು ಭರ್ತಿಯಾಗಿರುವುದಿಲ್ಲ. ಕಾಲೇಜುವಾರು ವಿವರ ವಾದ ವಿತರಣಾ ಪಟ್ಟಿ ಲಗತ್ತಿಸಲಾಗಿದೆ.

ಇ) ಸರ್ಕಾರಿ ಸೇವಾ ವೈದ್ಯರುಗಳಿಗೆ ೨೦೦೦-೨೦೦೧ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮೊ ಕೋರ್ಸುಗಳ ವಿವಿಧ ವಿಷಯಗಳಲ್ಲಿ ಒಟ್ಟಾರೆ ಇರುವ ಇನ್-ಸರ್ವಿಸ್ ಕೋಟಾ ಸ್ಥಾನಗಳು ಈ ಕೆಳಕಂಡಂತೆ ಇರುತ್ತವೆ.

ಪದವಿ ಸ್ಥಾನಗಳು (ಎಲ್ಲಾ ವಿಷಯಗಳು ಸೇರಿದಂತೆ)	--	೭೯
ಡಿಪ್ಲೊಮೊ ಸ್ಥಾನಗಳು (ಎಲ್ಲಾ ವಿಷಯಗಳು ಸೇರಿದಂತೆ)	--	೭೭
ಒಟ್ಟು		೧೫೬

ಕಾಲೇಜುವಾರು ಸ್ಥಾನಗಳ ಹಂಚಿಕೆ, ಭರ್ತಿಯಾದ ಸ್ಥಾನಗಳು, ಉಳಿದ ಸ್ಥಾನಗಳ ವಿವರಗಳನ್ನು ಅನುಬಂಧದಲ್ಲಿ ಕಾಣಿಸಿದೆ.